# ಸರ್ವಜ್ಞ ಗರ್ವದಿಂದಾದವನೆ...?

ಸಾಗರದ ಅಪಾರತೆಯನ್ನು ಮತ್ತು ಅದು ತನ್ನ ಗರ್ಭದಲ್ಲಿ ಅಡಗಿಸಿಟ್ಟುಕೊಂಡಿರುವ ಅಸಂಖ್ಯಾತ ಜೀವರಾಶಿಯನ್ನು ಗಮನಿಸಿದಾಗ; ಆಕಾಶದ ಅನಂತತೆಯಲ್ಲಿರುವ ಕೋಟ್ಯಾನುಕೋಟಿ ನಕ್ಷತ್ರಾದಿ ಆಕಾಯ ಕಾಯಗಳನ್ನು ನೋಡಿದಾಗ; ಅಷ್ಟೇ ಏಕೆ, ನಮ್ಮೀ ವಸುಂಧರೆಯ ವೈವಿಧ್ಯಮಯ ಜೀವಸಂಕುಲಗಳನ್ನು, ಅದರ ಮೇಲೆ ಸೃಷ್ಟಿಗೊಂಡಿರುವ ಪ್ರಕೃತಿ ವಿಶಿಷ್ಟತೆಗಳನ್ನು, ಅದರ ಅಂತ್ಯದಲ್ಲಿರುವ ನಿಗೂಢಗಳನ್ನು ಅರಿಯಲೆತ್ನಿಸಿದಾಗ ಮಾನವನ ತಿಳಿವಿನ ಅಲ್ಪತೆ ಅರಿವಿಗೆ ಬರುತ್ತದೆ. ಎಲ್ಲವನ್ನು ಬಲ್ಲೆನೆಂಬ ಅಹಂಕಾರದ ರಸ ಪಂಪಕವಿ ಹೇಳುವ ಹಾಗೆ ತೊಟ ತೊಟನೆ ಸೋರಿ ಹೋಗುತ್ತದೆ. ನಾವು ತಿಳಿಯಬೇಕಾದುದು, ಕಲಿಯಬೇಕಾದುದು ಅನಂತವಾದುದು. ಈ ಜಗತ್ತು, ಈ ವಿಶ್ವ ನಿನ್ನೆಮೊನ್ನೆಯ ಸೃಷ್ಟಿಯಲ್ಲ. ಅದರ ರಚನೆ ಪ್ರಾರಂಭಗೊಂಡೇ ಅನಂತ ಲಕ್ಷ ವರ್ಷಗಳಾಗಿದ್ದು, ಅದು ಸದಾ ಚಲನಶೀಲವಾಗಿದ್ದು, ಪರಿವರ್ತನಾಶೀಲವಾಗಿದ್ದು ಅಮೂರ್ತತೆಯ ಅನಂತ ಸ್ವರೂಪಗಳಲ್ಲಿ ಸಾಗುತ್ತಲೇ ಇದೆ. ಅಂದಿನಿಂದ ವರ್ತಮಾನದವರೆಗೆ ಪ್ರಕೃತಿ ಸೃಷ್ಟಿಸಿದ ವೈಶಿಷ್ಟ್ಯ– ವೈಚಿತ್ರ್ಯಗಳ ಜೊತೆ ಇಲ್ಲಿನ ಅಪಾರ ಜೀವಸಂಕುಲ ತನ್ನ ಅನಂತ ಜೀವನ ಯಾತ್ರೆಯಲ್ಲಿ ಬರೆದ– ಸಂಸ್ಕೃತಿ ನಾಗರಿಕತೆಗಳು ಚರಿತ್ರೆಯಾಗಿ ವರ್ತಮಾನಕ್ಕೆ ಚಾಚಿಕೊಂಡಿವೆ. ಇಂಥ ಅಪಾರ ಜ್ಞಾನ ರಾಶಿಯನ್ನು ಅರಿತಿದ್ದೇನೆಂದು ಪರಿಕಲ್ಪಿಸಿಕೊಳ್ಳುವುದು ಕೇವಲ ಅಹಂಕಾರದ ವಿಷಯವಾಗುವುದಿಲ್ಲ; ಅದು ಅವನ ಅಜ್ಞಾನದ, ಅಲ್ಪತೆಯ ಮತ್ತು ಮುಗ್ಧತೆಯ ವಿಷಯವಾಗುತ್ತದೆ. ಜ್ಞಾನದ ಅಪಾರತೆಯ ಮುಂದೆ ವ್ಯಕ್ತಿ ತನ್ನ ಮಿತಿಯನ್ನು ಅರಿತುಕೊಂಡಾಗ ವಿನಯವೆಂಬುದು ತನಗೆ ತಾನೇ ಮೂಡುತ್ತದೆ. 'ಶರಣು' ಎಂದವರಿಗೆ 'ಶರಣು ಶರಣು' ಎಂದು ಮಾರ್ನುಡಿದ ಬಸವಣ್ಣನಿಗೆ ಇದು ಚೆನ್ನಾಗಿ ತಿಳಿದಿದ್ದರಿಂದಲೇ ಅವನು ಮಹಾಮಾನವನಾದನು.

ಹಾಗಾದರೆ 'ಸರ್ವಜ್ಞ'ನೆಂಬ ಪದ ನಮ್ಮ ಸಂಸ್ಕೃತಿ ಮೀಮಾಂಸೆಯಲ್ಲಿ ಏಕೆ ಸೇರಿಕೊಂಡಿತು? 'ಓಮ್ನಿಸ್ಯೆಂಟ್' ಎಂಬ ಉಕ್ತಿಯೂ ಪಾಶ್ಚಿಮಾತ್ಯರಲ್ಲಿದೆ. ವರ್ತಮಾನದ ಒಂದು ಬಿಂದುವಿನಲ್ಲಿ ನಿಂತುಕೊಂಡು ಅರಿವನ್ನು ಶೋಧಿಸ ಹೊರಡುವ ವ್ಯಕ್ತಿ ಅಪಾರತೆಯನ್ನು ಅರಿಯುವುದಾದರು ಹೇಗೆ ಸಾಧ್ಯ? ಅವನ ಅರಿವು, ಶ್ರದ್ಧೆ, ಗ್ರಹಿಕೆ, ಅಧ್ಯಯನ, ಅನುಭವಗಳ ಮಿತಿಯ ವ್ಯಾಪ್ತಿಯಲ್ಲಿ ಲಭ್ಯವಾಗುತ್ತದೆ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತಾ ಜ್ಞಾನದ ಮೇಲು ಕೀಳುಗಳನ್ನು ಸೃಷ್ಟಿಸುತ್ತದೆ. ಈ ತಿಳಿವು ನಮ್ಮ ಮೀಮಾಂಸಕಾರರಿಗೆ ಇದ್ದುದರಿಂದಲೇ ಬಹುಶಃ ಅವರು 'ಸರ್ವಜ್ಞ'ನೆಂದರೆ ವ್ಯಕ್ತಿಯಲ್ಲ, ಅದೊಂದು ತತ್ವ ಅಥವಾ ಅರಿವಿನ ಸಂಕೇತವೆಂದು ಕರೆದರು. ಈ ಬಗೆಯಲ್ಲಿ ಪರಿಭಾವಿಸಲು ವಿಫಲರಾದ ಧಾರ್ಮಿಕ ಬುದ್ಧಿಯುಳ್ಳವರು 'ಸರ್ವಜ್ಞ'ನೆಂದರೆ 'ಪರಮಾತ್ಮ', 'ಪರಬ್ರಹ್ಮ', 'ಜಿನ', 'ಬುದ್ಧ', 'ಏಸು', 'ಪೈಗಂಬರ್' ಎಂದೆಲ್ಲಾ ಗುರುತಿಸಲು ಪ್ರಯತ್ನಿಸಿದರು. ಈ ಪ್ರಯತ್ನ ಮಾನವಾತೀತವಾದ ಸರ್ವವನ್ನು ಸೃಷ್ಟಿಸಬಲ್ಲ, ನಿರ್ವಹಿಸಬಲ್ಲ ಸರ್ವಶಕ್ತನೊಬ್ಬನಿದ್ದಾನೆ ಎಂಬ ನಂಬಿಕೆಯ ಆಧಾರದ ಮೇಲೆ ಮೂಡಿರುವಂಥದು. ಆದುದರಿಂದಲೇ ಸರ್ವಶಕ್ತನೆಂದು ಪರಿಭಾವಿಸಿಲಾದ 'ದೇವರು' ಸೃಷ್ಟಿಯಾದ. ಅವನು ಮತ್ತು ಅವನ ಧೂತರು ಸರ್ವಜ್ಞಾನಿಗಳೆಂದು ತೀರ್ಮಾನವಾಗಿಬಿಟ್ಟರು!

ಅನುಭವಿಗಳು ಬದುಕಿನ ಸಾರ ಬಲ್ಲವನನ್ನು ಸರ್ವಜ್ಞನಿರಬಹುದೆಂದು ಗುರುತಿಸುತ್ತಾರೆ. ಇದೊಂದು ಜಿಜ್ಞಾಸೆಗೆ– ತರ್ಕಕ್ಕೆ ಹತ್ತಿರವಾದ ಸತ್ಯ. ಬದುಕಿನ ಸಾರವೆಂದರೆ ಅದರಲ್ಲಿರುವ ರುಚಿ, ಸತ್ವ, ಬದುಕುವ ಆರೋಗ್ಯಕರ ಮನಸ್ಥಿತಿಯ ನೈತಿಕನೆಲೆಯ ವ್ಯಕ್ತಿಗೆ ಆ ಕಲೆ ಅರ್ಥವಾಗುತ್ತದೆ. ಅವನ ಹೃದಯ ವಿನಯ, ಬದುಕಿನ ಸವಿಯ ರಹಸ್ಯವನ್ನು ಅರಿವ ವಿಶಾಲತೆಯನ್ನು ರೂಢಿಸಿಕೊಳ್ಳುತ್ತದೆ. ತಾನೆಂದರೆ ತಾನಲ್ಲ, ತನ್ನನ್ನೊಳಗೊಂಡ ಸಮಾಜವೆಂಬ ಅರಿವು ಜಾಗೃತಗೊಳ್ಳುತ್ತದೆ. ತಾನು ಕಂಡ 'ಸಾರ'ದ ರುಚಿಯನ್ನು ತನ್ನ ಸುತ್ತ ಪಸರಿಸಲು ಅಪ್ರಯತ್ನ ಪೂರ್ವಕವಾಗಿ ಮಾಡುತ್ತಾನೆ. 'ಸರ್ವಜ್ಞತ್ವ'ವೆನ್ನುವುದು ಸರ್ವಜ್ಞ ಕವಿ ತಿಳಿಸುವಂತೆ 'ಸತ್ಯವ ನುಡಿವುದು ಮತ್ತು ತನ್ನಂತೆ ಪರರ ಕಾಣುವುದು.'

ನಮ್ಮ ಸರ್ವಜ್ಞ ಕವಿಯ ಹೆಸರು ಅವನು ಇಟ್ಟುಕೊಂಡ ಹೆಸರಲ್ಲ. ಜನರು ಅವನ ವಿಶಾಲವಾದ ಜೀವನಾನುಭವದ ಮಾತುಗಳನ್ನು ಕೇಳಿ ಮೆಚ್ಚಿ ಕೊಟ್ಟ ಹೆಸರು. ಅವನು ತನ್ನನೆಂದೂ ಸರ್ವಜ್ಞನೆಂದು ಕರೆದುಕೊಂಡಿಲ್ಲ. ಹಾಗೆ ಕರೆದುಕೊಳ್ಳುವುದು ಗರ್ವದ ನಡೆಯಾಗುತ್ತದೆಯೆಂದು ಅವನು ತಿಳಿದುಕೊಂಡಿದ್ದನು.

ಸರ್ವಜ್ಞನೆಂಬುವನು ಗರ್ವದಿಂದಾದವನೆ  
ಸರ್ವರೊಳಗೊಂದೊಂದು ನುಡಿ ಕಲಿತು। ವಿದ್ಯೆಯ  
ಪರ್ವತವಾದ ಸರ್ವಜ್ಞ

ಈ ತ್ರಿಪದಿಯನ್ನು ಸಹ ಸರ್ವಜ್ಞ ಬರೆದಿರಲಾರ. ಬರೆದಿಲ್ಲವೆಂದು ಕೆಲ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಸರ್ವಜ್ಞನ ಲೋಕಾನುಭವದ ಸಾರವೆಂಬುದು ಬದುಕನ್ನು ಅವನು ನಲುಮೆಯಿಂದ ಸ್ವೀಕರಿಸಿ ತಿಳಿವಳಿಕೆ ಹೊಂದಿದುದರಿಂದ ಬಂದಿರುವಂಥದು. ಅವನ ಸಾಮಾನ್ಯಾತೀತವಾದ ತಿಳಿವನ್ನು ಕಂಡ ಕವಿಯೊಬ್ಬ ಈ ತ್ರಿಪದಿ ಬರೆದು ಮೆಚ್ಚಿರಬಹುದು.

**■ ಶಿಕಾಕು**

## ಮಾತೇ ಮುತ್ತು

★ ಜಾತಿಗೆ ಬೇಧ ಇದ್ದರೂ, ನೀತಿಗೆ ಇಲ್ಲ.  
–ಗಾದೆ

★ ಅನೇಕರು ಸುಖದ ಗಳಿಗೆಗಳನ್ನು ನೆನಸಿಕೊಂಡು ಸಂತೋಷ ಪಡುವುದರ ಬದಲು, ದುಃಖದ ಗಳಿಗೆಗಳ ಬಂಧಿಗಳಾಗಿದ್ದಾರೆ.  
–ರಬ್ಬಿ ಲಿಯೋನೆಲ್ ಬ್ಲೂ

★ ಪರೀಕ್ಷಿಸದೆ ಒಬ್ಬನನ್ನು ನಂಬುವುದೂ, ನಂಬಿದವನಲ್ಲಿ ಶಂಕೆ ಪಡುವುದೂ ತೀರದ ದುಃಖ ತರುತ್ತದೆ.  
–ತಿರುವಳ್ಳುವರ್

★ ಮನಸ್ಸಿನಲ್ಲಿ ಪೂರ್ಣ ನಂಬಿಕೆ ಇದ್ದಾಗ ಜಯ ಖಂಡಿತ. ಅದಿಲ್ಲದಾಗ ಅಪಜಯವೇ.  
–ಪ್ರಜಾಪಿತ ಬ್ರಹ್ಮಕುಮಾರಿ

★ ನನ್ನ ನಂಬಿಕೆಯೊಂದು ಆಕಾಶ. ಅದು ನನಗೆ ನಿಲುಕುವುದಿಲ್ಲ. ನಮ್ಮ ಬದುಕಿನಲ್ಲಿ ನಾವು ಮಗ್ನರಾದರೆ ಸಾಕು, ಅದಕೆ ಚಿಂತೆಯಿಲ್ಲ.  
–ಚೆನ್ನವೀರ ಕಣವಿ

★ ಬಹಳ ಹೆಚ್ಚಾಗಿ ನಂಬುವುದು ಅಪಾಯಕಾರಿ. ಏಕೆಂದರೆ ಅದು ನಂಬದಿರುವುದರ ನೆರೆ.  
–ಎಮರ್‌ಸನ್

★ ಕೆಲಸ ಗುಣವುಳ್ಳದ್ದಾಗಲಿ, ಗುಣವಿಲ್ಲದ್ದಾಗಲಿ ಅದನ್ನು ಮಾಡುವ ಮೊದಲು ಪರಿಣಾಮವನ್ನು ವಿಮರ್ಶಿಸಿ ತಿಳಿದುಕೊಳ್ಳಬೇಕು. ಅವಸರದಲ್ಲಿ ಮಾಡಿದ ಕೆಲಸಗಳ ಫಲ ಮುಳ್ಳಿನಂತೆ ಸಾಯುವವರೆಗೂ ಹೃದಯವನ್ನು ನೋಯಿಸುತ್ತಿರುತ್ತದೆ.  
–ನೀತಿ ಶತಕ

★ ಕಾಲನಿಗೆ ಪ್ರಿಯನೂ ಇಲ್ಲ, ವೈರಿಯೂ ಇಲ್ಲ. ಅವನು ಎಂದಿಗೂ ಮಧ್ಯಸ್ಥನೂ ಅಲ್ಲ. ಕಾಲನು ಸರ್ವರನ್ನು ಎಳೆದುಕೊಂಡು ಹೋಗುತ್ತಾನೆ.  
–ಮಹಾಭಾರತ

★ ಸುಗುಣ ದೇಹದ ಚೆಲುವನ್ನು ಹೆಚ್ಚಿಸಿದರೆ, ದುರ್ಗುಣ ಅದನ್ನು ಕುಗ್ಗಿಸುತ್ತದೆ.  
–ಲೋಕೋಕ್ತಿ

★ ಅಗತ್ಯ ಬಿದ್ದಾಗ ಮೌನದಿಂದ ಇರಲು ತಿಳಿಯದವನಿಗೆ, ಬುದ್ಧಿವಂತಿಕೆಯಿಂದ ಮಾತನಾಡಲೂ ಬಾರದು.  
–ಪ್ಲೂಟಾರ್ಕ್

★ ಸಂಯಮವೆನ್ನುವುದು ಕಹಿ ರುಚಿಯುಳ್ಳ ಕಾಯಿ; ಆದರೆ, ಅದು ಹಣ್ಣಾದಾಗ ತಿನ್ನಲು ಸಿಹಿಯಾಗಿರುವುದು.  
–ರೂಸೋ

★ ಶಾಂತ ಸ್ವಭಾವ ಯಾರಲ್ಲಿ ಕಂಡು ಬರುವುದಿಲ್ಲವೋ ಅವರು ಸುಖದಿಂದಿರಲು ಸಾಧ್ಯವಿಲ್ಲ.  
–ಟ್ರೈಡನ್

★ ಶಕ್ತಿಶಾಲಿಯಾದವನು ಕೆಲಸ ಮಾಡುತ್ತಾನೆ; ಕೈಲಾಗದವನು ಉಪದೇಶ ಮಾಡುತ್ತಾನೆ.  
–ಜಾರ್ಜ್ ಬರ್ನಾಡ್ ಶಾ

★ ಕಳವಳವ ನೀಗಿಬಿಡು, ತಳಮಳವ ದೂರವಿಡು. ಕಳೆ, ತಳ್ಳು ಗಲಭೆ ಗಾಬರಿಯ ಮನದಿಂದ.  
–ಡಿವಿಜಿ

★ ಮತ್ತೊಬ್ಬರು ಹೇಳಿದುದನ್ನು ಯಥಾವತ್ತಾಗಿ ಸ್ವೀಕರಿಸುವವನು ಏಳಿಗೆಯಾಗಲಾರ.  
–ಪೆರಿಯಾರ್